ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):- ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಚುಕ್ಕೆ ಗುರುತಿಲ್ಲದ ೨೭ ಪ್ರಶ್ನೆಗಳಿಗೆ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಬೆಂಗಳೂರು-ಕೋಲಾರದ ರಾಷ್ಟ್ರೀಯ ಹೆದ್ದಾರಿ ಬಗ್ಗೆ

೧೯೯೨ (೧೨೪೫) ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಬೆಂಗಳೂರು-ಕೋಲಾರದ ರಾಷ್ಟ್ರೀಯ ಹೆದ್ದಾರಿ ಳರಲ್ಲಿ ಇತ್ತೀಚೆಗೆ ವಾಹನಗಳ ಓಡಾಟ ಜಾಸ್ತಿಯಾಗಿ ಅಪಘಾತಗಳಿಂದ ಹೆಚ್ಚು ಸಾವು ನೋವುಗಳು ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬೆಂಗಳೂರಿನಿಂದ ಮುಳುಬಾಗಿಲಿನವರೆಗೂ ರಾಷ್ಟ್ರೀಯ ಹೆದ್ದಾರಿ ನ. ೪ನ್ನು ೪ ದಾರಿಗಳ ರಸ್ತೆಯನ್ನಾಗಿ ಪರಿವರ್ತನೆ ಮಾಡಬೇಕೆಂದು ಸರ್ಕಾರವು ಕೇಂದ್ರ ಸರ್ಕಾರವನ್ನು ಒತ್ತಾಯಿಸುವುದೇ?

ಇ) ಮೇಲ್ಕಂಡ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳ ಓಡಾಟ ವೇಗವಾಗಿ ಚಲಿಸಲು ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಈ) ಮುಳುಬಾಗಿಲಿನ ಪಟ್ಟಣದ ಬಳಿ ವಾಹನಗಳ ಅಪಘಾತಗಳನ್ನು ತಪ್ಪಿಸಲು ಪಟ್ಟಣದ ಪಕ್ಕದಲ್ಲಿ ಬೈಪಾಸ್ ರಸ್ತೆಯನ್ನು ಮಾಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳು ಯಾವ ಹಂತದಲ್ಲಿವೆ?

ಶ್ರೀ ಜಿ. ಪೆಚ್. ಅಶ್ವತ್ಥ ರೆಡ್ಡಿ (ಲೋಕೋಪಯೋಗಿ ಸಚಿವರು):-

ಅ) ಬಂದಿದೆ.

ಆ) ಬೆಂಗಳೂರಿನಿಂದ ಮದ್ರಾಸ್‌ವರೆಗೆ ಈ ರಸ್ತೆಯನ್ನು 'ಎಕ್ಸ್‌ಪ್ರೆಸ್ ಹೈವೇ' ಆಗಿ ೨೦೦೦ ಎ. ಡಿ. ಒಳಗೆ ಅಭಿವೃದ್ಧಿಪಡಿಸಲು, ಕೇಂದ್ರ ಸರ್ಕಾರದವರು ಯೋಜನೆ ಹಾಕಿಕೊಂಡಿದ್ದಾರೆ. ಸದ್ಯಕ್ಕೆ ಬೆಂಗಳೂರಿನಿಂದ ಹೊಸಕೋಟೆಯವರೆಗೆ ರಸ್ತೆಯನ್ನು ೪ ಪಥ ರಸ್ತೆಯನ್ನಾಗಿ ಮಾಡಲು ೮ನೇ ಪಂಚ ವಾರ್ಷಿಕ ಯೋಜನೆಯಲ್ಲಿ, ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ.

ಇ) ಬೆಂಗಳೂರಿನಿಂದ ರಾಜ್ಯದ ಗಡಿಯವರೆಗೆ ರಸ್ತೆಯನ್ನು ಹಂತಹಂತವಾಗಿ, ಸಂಪೂರ್ಣವಾಗಿ ಬಲ ಪಡಿಸಲಾಗಿದೆ. ಮತ್ತು ಕೋಲಾರಕ್ಕೆ ಒಂದು ಬೈಪಾಸ್ ನಿರ್ಮಿಸಲಾಗಿದೆ. ನರಸಾಪುರಕ್ಕೂ ಕೂಡ ಬೈಪಾಸ್ ರಸ್ತೆ ನಿರ್ಮಿಸಲಾಗಿದೆ.

ಈ) ಮುಳಬಾಗಿಲಿನ ಬೈಪಾಸ್ ರಸ್ತೆಗೆ ಬೇಕಾದ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಈ ಕೆಲಸಕ್ಕೆ ಕೇಂದ್ರ ಸರ್ಕಾರದಿಂದ ರೂ. ೧೮೬.೪೪ ಲಕ್ಷ ರೂ.ಗಳ ಅಂದಾಜು ಪಟ್ಟಿ ಮಂಜೂರಾಗಿದ್ದು ಈ ಕೆಲಸವನ್ನು ಟೆಂಡರ್ ಮೂಲಕ ಶೀಘ್ರವೇ ಕೈಗೆತ್ತಿಕೊಳ್ಳಲಾಗುವುದು.

ಮುಳಬಾಗಿಲು ಪಟ್ಟಣದ ಪಕ್ಕದಲ್ಲಿ ರಾಷ್ಟ್ರೀಯ ಹೆದ್ದಾರಿ ಬೈಪಾಸ್ ನಿರ್ಮಾಣ

೧೯೯೩ (೧೨೬೭) ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು):- ಮಾನ್ಯ ಲೋಕೋಪಯೋಗಿ